Regd No M 1299 Sri ತಾ|| 12—10—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎ೧. ಏ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಕನ್ನಡಿಗನ ಪ್ರಾರ್ಥನೆ

ಹೇ ತಾಯಿ, ಕರ್ನಾಟಕ ದೇವಿ !
ಜನ್ಮಜನ್ಮದಲ್ಲಿಯೂ ಜನ್ಮಜನ್ಮಾಂತರದಲ್ಲಿಯೂ
ನಿನ್ನನ್ನೇ ನೆನೆಯುವೆವು, ಕಾಪಾಡು ತಾಯಿ
ನಿನ್ನ ಪಾದ ಬೀಳದ ಬಳಿ ಕುಳಿತು ನಾವಿಂದು
ವ್ರತಬದ್ಧರಾಗಿಹೆವು, ನಮ್ಮನಂಗೀಕರಿಸು ತಾಯಿ
ಯಾವ ಆಶ-ಆಮಿಷಗಳು ನಮ್ಮನಲುಗಿಸವು
ನಿನ್ನ ಏಕತೆಯ ಪಡೆಯುವೊಡೆ ನಮ್ಮನು ಕಳಿಸು
ಇಲ್ಲದಿರೆ ನಾವಿನಡಿ ತುಂಬಿ ಕಳಿಸಿಬಿಡು ತಾಯಿ

ಓ ತಾಯಿ ಕನ್ನಡದ ಮಹಾಮಾತೆ !
ಏಳು ಭಾರತದ ದಿವ್ಯಲೀಲೆಯನು
ಪರಿಪೂರ್ಣಗೊಳಿಸು, ಕನ್ನಡ ಜೋತಿಯ
ಜಾಗೃತಿಗೊಳಿಸಿ ನಡೆಸಲ್ಕೇಳು !
ಸತ್ಯಾಶ್ರಯರು ನಿನ್ನ ವಕ್ಕಳೆಲ್ಲರು ತಾವು
ಸತ್ಯಪ್ರತಿಜ್ಞೆಯನು ಕೈಕೊಂಡು ನಿಂತು
ಬೇಡುತಿಹರು, ಏಳು ಏಳು ತಾಯಿ !
ಮುಂದೆಂದಿಗು ಒಂದಾಗಿ ಏಳು ತಾಯಿ
ಏಳು ತಾಯಿ !

[ಶ್ರೀ ದೊಡ್ಡಮೇಟಿ ಅಂದಾನಪ್ಪನವರು ರಚಿಸಿರುವ 'ಪ್ರಾರ್ಥನೆ' ಯ ಒಟ್ಟು ೬ ಪದ್ಯಗಳಿವು]

× ಮದ್ರಾಸು ನಗರ ತಮಿಳು ನಾಡಿಗೆ ಸೇರಿದಾಗಿ ಅದನ್ನು ಬರಮಾಡಿಕೊಂಡು ಪೌರಸಭೆ ಅರ್ಪಿಸಲು ಸಾವಿರ ರೂ ಕೃತಜ್ಞತಾಪತ್ರ ವೆಲ್ಲೂರು ಪೌರಸಭೆ ಸಿದ್ಧಪಡಿಸುತ್ತಿದೆ

× ಪಾಕಿಸ್ತಾನ ಸರ್ಕಾರದ ಉಪ ಸಚಿವ ಅಲಿ ಜಹೀರ್ ಮೆಂಟ್ ಸದಸ್ಯ ಶ್ರೀ ಅಂಡ್ ಸೇನಿ ತಂತಾಗುವರೆಂದು ದೆಹಲಿ ಪತ್ರಿ.

ದಿವ್ಯವಾಣಿ

ಅನ್ಯರ ಸ್ತುತಿ ನಿಂದೆಗಳನ್ನು ಲೆಕ್ಕಿಸದೆ ಸತ್ಯಪಥದಿಂದ ಸಾಗುವವನೇ ಧೀರ
ದೊಡ್ಡಸ್ತಿಕೆಯ ಮೋಹದಿಂದ ದೂರವಾಗಿರುವವನೇ ವೀರ.

— ಲಿಂಕನ್

ಮೂದರಿ ಚುನಾವಣೆ

ಮೈಸೂರು ಸರ್ಕಾರದ ಪ್ರಧಾನ ಚುನಾವಣಾಧಿಕಾರಿಗಳು ನಿನ್ನೆ ಬೆಳಿಗ್ಗೆ ನಂಜನಗೂಡು ತಾಲ್ಲೂಕು ಶೂದಲಾವುದಲ್ಲಿ ಗ್ರಾಮವಾಸಿಗಳ ತಿಳಿವಳಿಕೆಗೆಂದು ಮೂದರಿ ಚುನಾವಣೆ ಏರ್ಪಡಿಸಿದ್ದರು. ಕಾಯದೆ ಸಚಿವರು, ಪತ್ರಿಕೆಯವರು ಚುನಾವಣೆಯನ್ನು ನೋಡಿದರು.

ಭೂದಾನ

ಬಡವರಿಗೆ ಹಂಚಲು ಲಲಿತಾಪುರ ದಲ್ಲಿ ಶ್ರೀ ವಿನೋಬಾಭಾವೆಯವರಿಗೆ ವತ್ತ ನಾನೂರಾ ಲಕ್ಕ ಎಕ್ರೆ ಭೂಮಿ ದಾನ ಮಾಡಲಾಯಿತು.

ನಾಯಿಕೆಮ್ಮಿಗೆ ಔಷಧಿ

ಲಂಡನ್ನಿನಲ್ಲಿಯ ಓರ್ವ ವ್ಯವಸಾಯಗಾರನ ಈರ್ವರು ಮಕ್ಕಳು ನಾಯಿಕೆಮ್ಮಿನಿಂದ ನರಳುತ್ತಿದ್ದರು. ಕಣಿ ಹೇಳುವ ಹೆಂಗಸೋರ್ವಳು ಅತನ ಪತ್ನಿಗೆ ಒಂದು ಔಷಧಿ ಹೇಳಿದಳು. ಅದೇನೆಂದರೆ ಹಳೇ ಕಣದ ಹುಲ್ಲು ಮೆದೆಯಿಂದ 3 ಕೈತುಂಬ ಹುಲ್ಲನ್ನು ತೆಗೆದು, ಅದನ್ನು ನೀರಿಗೆ ಹಾಕಿ ಮೂರುವರೆಗಂಟೆ ಕಾಲ ಕುದಿಸಿ, ನಂತರ ದಿನಕ್ಕೊಂದಾವರ್ತಿ ಒಂದು ಲೋಟಾ ತುಂಬಾ 3 ದಿನಗಳು ನಿನ್ನ ಮಕ್ಕಳಿಗೆ ಕುಡಿಸು ವಾಸಿಯಾಗುತ್ತೆ ಎಂದಳು ಹಾಗೇ ಮಾಡಲಾಗಿ 3 ದಿನಗಳ ನಂತರ ಮಕ್ಕಳಿಗೆ ವಾಸಿಯಾಯಿತು (ಲ್ಯಾನ್ಸೆಟ್ ಪತ್ರಿಕೆಯಲ್ಲಿ ಈ ವಿಷಯ ಪ್ರಕಟವಾಯಿತು)

× ಸಚಿವ ಮೆಕಟ್ಯಾಯರು ಮದ್ರಾಸು ವಿಧಿಮಂಡಲಿಗೆ ನಾಮಕರ್ಣರಾದರು

ಡಾ. ಅಂಬೇಡಕರರ ಹೇಳಿಕೆ ಪ್ರಕಟಣೆ

ಅಮೇರಿಕದ ಚೀಫ್ ಆಫ್ ಸ್ಟಾಫ್ ಜನರಲ್ ಓಮಾರ್ ಬ್ರಾಡ್ಲಿ ನ್ಯೂಯಾರ್ಕಿನಲ್ಲಿ ಮೊನ್ನೆ ಹೇಳಿಕೆಯಿತ್ತು ಕೊರಿಯ ಕಾಳಗದಲ್ಲಿ ಈಗ ಅಣು ಬಾಂಬಿನ ಅಗತ್ಯವಿಲ್ಲ ಶಾಂತಿ ಸಂಧಾನ ಫಲಕಾರಿಯಾಗುವ ಸಂಭವವಿದೆ ಎಂದು ತಿಳಿಸಿದ್ದಾರೆ

ಪರ್ಷಿಯ ತೈಲ ವಿವಾದದಲ್ಲಿ ಓಟು ಯಾರಿಗೆ ಕೊಡಬೇಕೆಂದು ವಿಶ್ವಸಂಸ್ಥೆ ಭಾರತ ಪ್ರತಿನಿಧಿ ಸರ್ ಬಿ ಎನ್ ರಾವ್ ಭಾರತ ಸರ್ಕಾರವನ್ನು ಕೇಳಿರುವುದಾಗಿ ವಿಶ್ವಸಂಸ್ಥೆ ವಾರ್ತೆ

ಭಾರತ ಪಾರ್ಲಿಮೆಂಟಿನಿಂದ ಮಾಜಿ ಸಚಿವ ಶ್ರೀ ಆಂಬೇಡಕರರು ನಿನ್ನೆ ಹೊರಬಂದರೆಂದು ದೆಹಲಿ ವಾರ್ತೆ ಪಾರ್ಲಿಮೆಂಟಿನ ಉಪಾಧ್ಯಕ್ಷರು ರಾಜೀನಾಮೆ ಹೇಳಿಕೆ ಬಗೆಗೆ ಸೂಚಿಸಿದ ಕ್ರಮವನ್ನು ಅನರು ಒಪ್ಪದೆ ಸಭೆ ಬಿಟ್ಟಿದ್ದರು

ಸೋವಿಯಟ್ ರಷ್ಯ ಈಜಿಪ್ಟಿಗೆ ಬೆಂಬಲಿಸಿದೆಯೆಂದು ಬರ್ಲಿನ್ ವಾರ್ತೆ

ಹಿಂದೂಕೋಡು ಕೈಬಿಟ್ಟಿದ್ದು, ನಿನ್ನ ವರ್ಗದವನ್ನು ಕಾಣುವ ಬಗೆಗೆ ಅಸಂತೃಪ್ತಿ ವ್ಯಕ್ತ ಭಾರತ ವಿದೇಶ ನೀತಿಗೆ ಒಪ್ಪಿಗೆಯಿಲ್ಲದಿರುವದು ಇವೇ ಶಂಭೂ ರಾಜೀನಾಮೆಗೆ ಕಾರಣವೆಂದು ಡಾ॥ ಅಂಬೇಡಕರು ದೆಹಲಿಯಲ್ಲಿ ಹೇಳಿಕೆ ಇತ್ತಿದ್ದಾರೆ ಭಾರತ ಪಾಕಿಸ್ತಾನಗಳಲ್ಲಿ ಕಾಶ್ಮೀರ ಹಂಚಿಕೆಯಾಗಬೇಕೆಂದು ಅವರ ಹೇಳಿಕೆ ನಿನ್ನೆ ಅವರ ಹೇಳಿಕೆ ಪ್ರಕಟವಾಯಿತು

× ಆಗ್ನೇಯ ಏಷಿಯದ ಸಮಾಜವಾದಿಗಳು ರಂಗೂನಿನಲ್ಲಿ ಮುಂದಿನ ತಿಂಗಳು ವಾರಾನೆ ವಾರ ಸಮಾವೇಶಗೊಳ್ಳುವರೆಂದು ರಂಗೂನಿನಿಂದ ವಾರ್ತೆ ಬಂದಿದೆ

ಅಪಹರಣ

ಬೆಂಗಳೂರು ನಗರ್ತಪೇಟೆಯ ಅಂಗಡಿಯೊಂದರಲ್ಲಿ ಇತ್ತೀಚಿಗೆ ಕನ್ನ ಬಿದ್ದು 7 ಸಾವಿರ ರೂ ಗಳಷ್ಟು ಆಭರಣಗಳ ಅಪಹರಣ ಆಗಿದೆ

ಶ್ರೀ ಚಂದ್ರಮೌಳೀಶ್ವರ ಮಹೋತ್ಸವದ

ಮೂರನೇ ದಿನದ ಕಾರ್ಯಕಲಾಪಗಳು

[ಸ್ವಂ ಸು. ತಂತಿ] ಡಾಕೋರ್, ಅ 11

ಶ್ರೀ ಚಂದ್ರಮೌಳೀಶ್ವರ ಮಹೋತ್ಸವದ 3 ನೇ ದಿವಸದ ಕಾರ್ಯಕಲಾಪಗಳು ಮೊನ್ನೆ ಡಾಕೋರ ನಾಗರೀಕರಿಂದ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು ಹೊರದೇಶದ ಜನರು ಶ್ರೀ ಮಹಾರುದ್ರ, ಶಕ್ತಿಮಾತ ಮತ್ತು ಜಗದ್ಗುರುಗಳವರ ದರ್ಶನ ಪಡೆದರು. ಸಾಯಂಕಾಲ ನಡೆದ ಭಾರಿ ಸಭೆಯಲ್ಲಿ ವಕೀಲ್ ದೀನನಾಥ್ ಮತ್ತಿತರರು ಭಾಷಣ ಮಾಡಿದರು ಜನರು ಶಕ್ತಿ ಮಾತೆಯನ್ನು ಪೂಜಿಸಬೇಕೆಂದೂ, ರಾಮರಾಜ್ಯಕ್ಕೆ ಬೆಂಬಲವೀಯಬೇಕೆಂದೂ ಜಗದ್ಗುರುಗಳವರು ಮಾಡಿದ ಅಮೋಘ ಭಾಷಣದಲ್ಲಿ ತಿಳಿಸಿದರು

ಮಹೋತ್ಸವದ ಕಾರ್ಯಕಲಾಪಗಳ 4 ನೇ ದಿವಸವಾದ ನಿನ್ನೆ ಅಂದವಾಗಿ ಶೃಂಗರಿಸಲ್ಪಟ್ಟಿದ್ದ ಪಲ್ಲಕ್ಕಿಯಲ್ಲಿ ಶ್ರೀ ಚಂದ್ರಮೌಳೀಶ್ವರ ಮಹಾದೇವರ ಉತ್ಸವವು ರಾಜಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಜೊತೆಯಲ್ಲಿ ಜಸ್ಪಾಳೆ ಭಜನೆಯವರೂ, ಸನ್ಯಾಸಿಗಳೂ ಮತ್ತಿತರರೂ ನೆರೆದಿದ್ದರು ಮತ್ತೊಂದು ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರುಗಳು ಆಸೀನರಾರೂಢರಾಗಿದ್ದರು. ರಸ್ತೆಗಳಲ್ಲಿ, ಮನೆಯ ಕಿಟಕಿಗಳಲ್ಲಿ, ಬಿಸಿಲು ಮಚ್ಚುಗಳ ಮೇಲೆ ಜನರು ಕಿಕ್ಕಿರಿದು ಸೇರಿದ್ದು, ದರ್ಶನಲಾಭ ಪಡೆದು ಅತ್ಯಾನಂದಭರಿತರಾದರು.

ನಾಲ್ಕು ಗಂಟೆಗಳ ಕಾಲ ನಡೆದ ಈ ವೈಭವ ಉತ್ಸವದಲ್ಲಿ ದಾರಿಯುದ್ದಕ್ಕೂ ಪೂಜೆಗಳು, ಮಂಗಳಾರತಿಗಳು ನಡೆದು ಕಾಣಿಕೆಗಳು ಅರ್ಪಿಸಲಾಗುತ್ತಿದ್ದಿತು.

ಸಾಯಂಕಾಲ ಶ್ರೀ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಧರ್ಮಸಮ್ಮೇಳನವು ನಡೆದು ಸಹಸ್ರಾರು ಜನರು ಭಾಗವಹಿಸಿದ್ದರು. ವಿದ್ವಾಂಸರಾದ ಮಹಾ ಪಂಡಿತರ ಭಾಷಣಗಳು ನಡೆದವು. ಅನೇಕ ವಿನೋದಾವಳಿಗಳೂ ಇದ್ದುವು. ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳು ಭಾಷಣಗಳ ಸಾರಾಂಶ ತಿಳಿಸಿ ಧರ್ಮಶಾಸ್ತ್ರಗಳ ಆಧಾರವಿತ್ತು, ಜನರು ಧರ್ಮಮಾರ್ಗವನ್ನನುಸರಿಸಬೇಕೆಂದೂ ತಿಳಿಸಿದರು. ರಾತ್ರಿ ಭಜನೆ ನಡೆಯಿತು. ಮಹಾರುದ್ರ ಪೂರ್ಣಾಹುತಿಯು ಇಂದು ನಡೆಯಿತು. ಸಂಮೇಳನವು ನಡೆಯುವುದು.

ಮೈಸೂರು ವೃತ್ತಾಂತ

ಅಧಿಕಾರಿಗಳನ್ನು ಕುದುರೆಗಳೆಂದು ಕರೆಯಕೂಡದು

ಮೈಸೂರು ಸೌಂಸಭೆಗೆ ಇಂಜನಿಯ ಎಂದರು. ಕಮಿಷನರ್ ಶ್ರೀ ಸ್ವಾಮಿ ರನ್ನು ಅರಿಸುವ ಪಟ್ಟ ನಿನ್ನೆ ಜಿಳಿಗ್ಯೆ ಪೌ ನಾರ್ಥ್ ಹೇಳಿದರು : ಅಧಿಕಾರಿಗಳನ್ನು ಸಭೆ ನುಂದೆ ಬಂದಿತ್ತು. ಆ ಪೈಕಿ ಶ್ರೀ ಶಿವಪ್ಪ ಎಂಬವರೂ ಒಂದು ಹೆಸರು. ಶ್ರೀಯುತರು ಹಾಲೀ ನುಗ್ಗು ಪಾ ಜಿಕ್ಕಿನಲ್ಲಿರುವರಂತೆ ಮು ಕ್ಕಿ. ಶ್ರೀ ಟಿ ವೆಂಕಟರಮಣಯ್ಯನವರ ಅಪೇಕ್ಷೆ ವೇರೆ, ದಕ್ಷರೆಂದು ವರ್ಗಾಯಿಸಲ್ಪಟ್ಟರು ಶ್ರೀ ವೆಂಕಂದಂಂವ ಇವರ ಹೆಸರನ್ನು ಸೂಚಿಸಿದರಂತೆ ! ಆದರೆ ಈ ಇಂಜನಿಯರು ಜೂನಿಯರ್ ! ಶ್ರೀ ಟಿ. ನರಸಿಂಹಯ್ಯಂಗಾರ್ಯರ ಇವರ ಒಗೆಗೆ ಹೇಳಿದರು : 'ಆ ವಿಲಿಂಗ್ ಹಾಸ್ ! ಮೈಸೂರಿಗೆ ಬರಲಿಚ್ಚಿಸುವುದಿಲ್ಲ ಹಾರ್ಸ್‌ಗಳಿಗೆ ರೆಫರ್ ಮಾಡಕೂಡದು.

ಶಾಸನ ಸಭೆ

ಶ್ರೀ ವಿ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಿನ್ನೆ ಸಮಾವೇಶವಾಗಿದ್ದ ಶಾಸನ ಸಭೆಯಲ್ಲಿ ನಾಕು ಗೆಜಿಟೆಡ್ ಅಧಿಕಾರಿಗಳ ತುಟ್ಟಿಭತ್ಯ ಅಧಿಕ ಮಾಡುವ ಕುರಿತು ಪ್ರಶ್ನೋತ್ತರಗಳಾದವು. ಸಚಿವ ಶ್ರೀ ದಾಸಪ್ಪನವರು ಉತ್ತರಕೊಡುತ್ತಾ, ವೇತನ ಅಧಿಕನಾಡುವ ವಿಷಯ ಸರ್ಕಾರಿ ಪರ್ಯಾಲೋಚನೆಯಲ್ಲಿದೆ. ಎಷ್ಟು ಹೆಚ್ಚು ಮಾಡಲಾಗುವದೆಂಬುದನ್ನು ನೋಡಿ ಹೇಳಬೇಕು. ಸ್ಯಾಲರಿ ಡಿವೆಜ್ ಕಮಿಟಿ ವರದಿ ಬಂದಿದೆ ಎಂದರು

ಸ ತ್ಯ ವಾ ದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1-14-0

SATYAVADI

Advt Rate, Casual

Rs 2 per Col Inch

ರಣಜಿತ್

ಕೀರ್ತಿಯಿತ 3 ನೇ ವಾರ

ಶಬಿನಾ

ಮನಮೋಹನ ಹಿಂದಿ ಚಿತ್ರ

ಪಾತ್ರ: ಶಾಂ, ನಸೀಂ, ಸಪ್ರೂ, ಕಕ್ಕೂ

ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 12-10-51 ರಿಂದ

ಬೈರಾಂಖಾನ್ (ಹಿಂದಿ)

Protect the Cow

ಗೋ ಸಂರಕ್ಷಣೆ ಮಾಡಿ

ಅಪೇರ— ಮೋತಿಲಾಲ್.

ಅಮೋಘ 3 ನೇ ವಾರ ಜಯಪ್ರದ 2 ನೆ ವಾರ

ನವಾರ್ಧಿಕಾರಿ

ಪ.ಹೊನ್ನತ ತಮಿಳು ಚಿತ್ರ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ್, ಸಂಬಿಯಾಂ

ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 11-10-51 ರಿಂದ

ಷಾದಿ ಕಿ ರಾತ್ (ಹಿಂದಿ)

ಬಡೀ ಬಹು

ಅಮೋಘ ಹಿಂದಿ ಚಿತ್ರ ದಿನ 3 ಆಟಗಳು

ಬೆಳಗಿನ ಪ್ರದರ್ಶನ 10-10-51 ರಿಂದ

ಅನ್ಮೋಲ್ ಘಡಿ (7 ದಿನಗಳು)

ಉಡ್‌ಲಾಂಡ್

ಜನಪ್ರಿಯ 2 ನೇ ವಾರ

ಪ್ರತಿ ಸಂಸಾರವೂ ನೋಡಲೇಬೇಕಾದ ಅಮೋಘ ಪೌರಾಣಿಕ ಹಿಂದಿ ಚಿತ್ರ

ಶ್ರೀ ಗಣೇಶ ಜನ್ಮ

ನಿರೂಪ ರಾಯ್, ತ್ರಿಲೋಕ್ ಕಪೂರ್

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ತಾ॥ 10 ರಿಂದ

— ಅ ಬಿ ಡಾ —

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿ ಮಿ ಟೆ ಡ್

ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್

ಶ್ರೀಯುತ ಟಿ ವೆಂಕಟರಮಣಯ್ಯನವರ ಅಪೇಕ್ಷೆ ವೇರೆ, ದಕ್ಷರೆಂದು ವರ್ಗಾಯಿಸಲ್ಪಟ್ಟರು ಶ್ರೀ ವೆಂಕಂದಂಂವ ಇವರ

12-10-51 ರಿಂದ ಅಮೋಘ ಪ್ರಾರಂಭ

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಟದವರ ಮಹೋನ್ನತ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಜೆ. ಆರ್. ಸ್ವಾಮಿಯವರು, ಕಲಾವಿಶಾರದ ಕೊಟ್ಟೂರಪ್ಪ

ನಿರ್ದೇಶನ— ಆರ್. ಎಂ. ವೀರಭದ್ರಯ್ಯ. [ಪ್ರತಿ ದಿನ 3 ಆಟಗಳು]

SUKH SAMPATH CHITRAPAT Release

Asoka Road, Mysore

Edited, Printed and Published by Dharma Prachara [illegible] M. S. Krishna Rao, at the Satyavadi Press Chamarajapura Mysore